ಈ ಸಾಕ್ಷಿಯನ್ನು ದಿನಾಂಕಃ 23.04.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದ

ಸಿದ್ದನಾಯಕ ನನಗೆ ಪರಿಚಿತರು ಸಂಬಂಧಿಕರಲ್ಲ. ನಾವು ಒಂದೇ ಊರಿನವರು ಮತ್ತು ಒಂದೇ ಜನಾಂಗದವರು ಎಂದರೆ ಸರಿ. ನಾನು ಅಪಘಾತವನ್ನು ಮುಂದೆಯಿಂದ 50 ಅಡಿ ದೂರದಲ್ಲಿ ನೋಡಿರುತ್ತೇನೆ. ಆ ದಿನ ಸಿದ್ದನಾಯಕರವರು ಅವರ ತಮ್ಮ ಜಡಿನಾಯಕರವರ ಜೊತೆ ಮೋಟಾರು ಬೈಕಿನಲ್ಲಿ ಹೋಗುತ್ತಿದ್ದರು ಸದರಿ ಮೋಟಾರು ಸೈಕಲನ್ನು ಜಡಿನಾಯಕವರು ಚಲಾಯಿಸುತ್ತಿದ್ದರು. ಅಪಘಾತವಾಗುವ ಸಮಯದಲ್ಲಿ ಎದುರುಗಡೆಯಿಂದಾಗಲೀ ಅಥವಾ ಹಿಂದುಗಡೆಯಿಂದಾಗಲೀ ಯಾವುದೇ ವಾಹನ ಬಂದಿರುವುದಿಲ್ಲ. ರಸ್ತೆಯಲ್ಲಿ ತಿರುವು ಇತ್ತು ಹಳ್ಳ ಇರಲಿಲ್ಲ. ಜಡಿನಾಯಕರವರು ಎಷ್ಟು ಸ್ಪೀಡಾಗಿ ಹೋಗುತ್ತಿದ್ದರು ಎಂದು ನನಗೆ ಹೇಳಲಾಗುವುದಿಲ್ಲ ನಾನು ಜಮೀನಿನಲ್ಲಿ ದೂರದಲ್ಲಿ ನಿಂತುಕೊಂಡಿದ್ದೆ. ನಾನು ಸಿದ್ದನಾಯಕರವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿರುವುದಿಲ್ಲ. ನಾನು ಅಪಘಾತವಾದ ತಕ್ಷಣ ಸ್ಥಳಕ್ಕೆ ಹೋದಾಗ ಸಿದ್ದನಾಯಕರವರಿಗೆ ಪ್ರಜ್ಞೆ ಇತ್ತು. ನಾನು ಸಿದ್ದನಾಯಕರವರ ಕಮಳಿಬಾಯಿಯನ್ನು ಕರೆಯಲು ಹೋಗಿ ವಾಪಸ್ಸು ಬರುವಾಗ ಸಿದ್ದನಾಯಕರವರು ಮೃತಪಟ್ಟಿದ್ದರು. ಅಪಘಾತ ಸ್ಥಳದಿಂದ ಕಮಳಿಬಾಯಿ ಮನೆ ½ ಕಿಮೀ ದೂರದಲ್ಲಿದೆ. ಯಾವುದೇ ಅಪಘಾತವಾದಾಗ ಮೊದಲು ಚಿಕಿತ್ಸೆ ಕೊಡಿಸುವುದು ಮುಖ್ಯವಾಗಿರುತ್ತದೆ ಎಂದರೆ ಸರಿ. ಸಿದ್ದನಾಯಕರವರನ್ನು ಚಿಕಿತ್ಸೆಗೆ ಕರೆದುಕೊಂಡು ಹೋಗಲು ತೊಂದರೆ ಇರಲಿಲ್ಲ. ನಾನು ಸಿದ್ದನಾಯಕರವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದಿಲ್ಲ. ಸಿದ್ದನಾಯಕರವರನ್ನು ತದನಂತರ ಎಲ್ಲಿಗೆ ಕರೆದುಕೊಂಡು ಹೋದರು ಎಂದು ನನಗೆ ಗೊತ್ತಿಲ್ಲ. ನಾನು ಅಪಘಾತವಾದ ದಿನ ಸಿದ್ದನಾಯಕರವರ ಮನೆಗೆ ಹೋಗಿರುವುದಿಲ್ಲ. ಅಪಘಾತವಾದ ಎರಡು ತಿಂಗಳ ನಂತರ ರಾಮಾಪುರ ಠಾಣೆಗೆ ನನ್ನನ್ನು ಕರೆಸಿದ್ದರು ಅಲ್ಲಿ ಹೇಳಿಕೆ ಕೊಟ್ಟಿದ್ದೇನೆ. ನಾನು ಅಪಘಾತ ಸ್ಥಳದಲ್ಲಿದ್ದೆ ಎಂದು ಪೋಲಿಸರಿಗೆ ಯಾರು ಮಾಹಿತಿ ನೀಡಿದರೆಂದು ನನಗೆ ಗೊತ್ತಿಲ್ಲ. ಸಿದ್ದನಾಯಕರವರು ಹೇಗೋ ಸತ್ತಿದ್ದರು ನಾನು ಅವರು ಅಪಘಾತದಲ್ಲಿ ಸತ್ತಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಜೂನಾಯಕ ಬಿನ್ ರಾಮನಾಯಕ ನಮ್ಮ ಊರಿನವರೇ ಎಂದರೆ ಸರಿ. ನಾನು, ರಾಜೂನಾಯಕ ಮತ್ತು ಅರ್ಜಿದಾರರು ಒಂದೇ ಊರಿನವರಾಗಿದ್ದು ಪರಿಚಯವಾಗಿರುತ್ತಾರೆ ಮತ್ತು ಒಂದೇ ಜನಾಂಗದವರು ಇರುತ್ತಾರೆ. ನಾನು ಹೇಳುವಂತೆ ದಿನಾಂಕಃ 04.11.2024 ರಂದು ಯಾವುದೇ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಪಡೆಯಲು ಅನುಕೂಲವಾಗುವಂತೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಡಿನಾಯಕರವರು ಓಡಿಸುತ್ತಿದ್ದ ಮೋಟಾರು ಬೈಕು ನಂಬರು ನೆನಪಿರುವುದಿಲ್ಲ. ಅದು ಹೊಂಡಾ ಶೈನ್ ಮೋಟಾರು ಬೈಕಾಗಿರುತ್ತದೆ. ಬೈಕು ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ಬೈಕು ಡ್ಯಾಮೇಜ್ ಆಗಿತ್ತಾ ಎಂದು ನನಗೆ ನೆನಪಿಲ್ಲ. ನಾನು ಹೇಳುವಂತೆ ಯಾವುದೇ ಅಪಘಾತವಾಗಿಲ್ಲ ಮತ್ತು ಬೈಕಿಗೆ ಯಾವುದೇ ಡ್ಯಾಮೇಜ್ ಆಗಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಅರ್ಜಿದಾರರು ಒಂದೇ ಜನಾಂಗದವರಾದ ಕಾರಣ ಪರಿಹಾರ ಬರಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಕೋರ್ಟು ಬಿಟ್ಟು ಬೇರೆ ಕೊರ್ಟಿನಲ್ಲಿ ಸಾಕ್ಷಿ ಹೇಳಿರುವುದಿಲ್ಲ.

ಮರು ವಿಚಾರಣೆ ಇಲ್ಲಃ

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ,
ಓ ಹೇ ಕೇ ಸರಿ ಇದೆ,

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.